# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಥಣಿ

---

**ಸಿ.ಸಿ.ನಂ : 6952/2021** **ದಿನಾಂಕ : 15/11/2023**

**ಸಿ. ಡಬ್ಲೂ : 3**

**ಪಿ. ಡಬ್ಲೂ : 3**

---

| | |
|---|---|
| ಸಾಕ್ಷಿದಾರರ ಹೆಸರು | ಬೀಮಪ್ಪ ಬಸಪ್ಪ ತೇಲಿ |
| ವಯಸ್ಸು | 37 ವರ್ಷ |
| ಉದ್ಯೋಗ | ಶೇತ್ಕಿ |
| ವಾಸಸ್ಥಳ | ದರೂರ |
| ದಿನಾಂಕ | **15/11/2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ</u>

ನನಗೆ ಚಾಸಾ-1 ,2, 7 ರಿಂದ 9 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುವುದಿಲ್ಲ. ಮಲ್ಲಿಕಾರ್ಜುನ ಪೆಟ್ರೋಲ ಪಂಪ ಬಳಿ ಟ್ರ್ಯಾಕ್ಟರನ್ನು ನಿಲ್ಲಿಸಲಾಗಿತ್ತು. ಮರುದಿನ ಟ್ರ್ಯಾಕ್ಟರನ್ನು ನೋಡಲಾಗಿ, ಟ್ರ್ಯಾಕ್ಟರ ಇದ್ದಿರಲಿಲ್ಲ, ಕೇವಲ ಟ್ರೇಲರಗಳು ಮಾತ್ರ ಇದ್ದವು.

ಸಾಕ್ಷಿಯು ಪಂಚನಾಮೆ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಪಂಚನಾಮೆನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-2 ಹಾಗೂ 3 ಎಂದು ಗುರುತಿಸಲಾಗಿದೆ. ಪೊಲೀಸರು ಸದರಿ ಪಂಪನಲ್ಲಿ ಕ್ಯಾಮರಾವನ್ನು ನೋಡಿರುತ್ತಾರೆ.

ಸಾಕ್ಷಿಯು ಇನ್ನೊಂದು ಪಂಚನಾಮೆ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಪಂಚನಾಮೆನ್ನು ನಿಪಿ-6 ಎಂದು , ಸಾಕ್ಷಿ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿನಾಂಕಃ 19.12.2020 ರಂದು ಮುಂಜಾನೆ 9.00 ಗಂಟೆಯಿಂದ 10.00 ವರೆಗೆ ನೀವು, ಚಾಸಾ-1, 2 ಸೇರಿಕೊಂಡು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೀರಿ ಎಂದರೆ ಸರಿ. ಟ್ರಾಕ್ಟರ ನಿಂತ ಸ್ಥಳದ ಸಿಸಿಟಿವಿ ಫೂಟೇಜನ್ನು ಪೊಲೀಸರಿಗೆ ತೋರಿಸಿರುತ್ತೀರಿ ಎಂದರೆ ಸರಿ. ಘಟನಾ ಸ್ಥಳವು ಸರ್ವೆ ನಂಬರ 485/1 ಬಿ ದಲ್ಲಿ ಇರುತ್ತದೆ ಎಂದರೆ ನನಗೆ ಗೊತಿಲ್ಲ, ಆದರೆ ಪಂಪ ಇರುತ್ತದೆ. ಅಲ್ಲಿ 4 ಫೀಟ ಅಂತರದಲ್ಲಿ ಪೆಟ್ರೋಲ ಪಂಪ ಇರುತ್ತದೆ ಎಂದರೆ ಸರಿ. ಅಲ್ಲಿ ಒಂದು 7 ಅಡಿ ಕಂಪೌಂಡ ಇರುತ್ತದೆ ಎಂದರೆ ಸರಿ. ಪೆಟ್ರೋಲ ಪಂಪನ ಪಶ್ಚಿಮಕ್ಕೆ ಕಂಪೌಂಡ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಗೇಟು ಇರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ</u> ಆರೋಪಿತರ ಪರವಾಗಿ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಯಾವುದೇ ಸಮಂಜಸ ಕಾರಣ ಇರುವುದಿಲ್ಲ. ಆ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ